ಸಿ.ಸಿ .ನಂ.126/2023 ಪಿಡಬ್ಲೂಃ 1

ದಿನಾಂಕಃ 25-07-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಎನ್ ಎಮ್ ಎನ್ ವಕೀಲರಿಂದಃ**

15. ಆರೋಪಿಯ ವಿರುದ್ಧ ನಿವೃತ್ತ ಲೆಕ್ಕ ಪರಿಶೋಧನಾ ಅಧಿಕಾರಿ ಎನ್ ವಿ ನಾಯ್ಕರವರ ತನಿಖೆಯ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದು ಅದರ ನಂತರ 64 enquiry ನಡೆಯುತ್ತಿದೆ ಎಂದರೆ ಸರಿ . ಈಗಲೂ 64 enquiry ನಡೆಯುತ್ತಾ ಇದೆ . 64 enquiry ನಡೆಯುತ್ತಿರುವುದರಿಂದ ಎನ್ ವಿ ನಾಯ್ಕರವರು ಹಾಕಿರುವ ಲೆಕ್ಕ ಪರಿಶೋಧನಾ ವರದಿಗೆ ಯಾವುದೇ ಮಹತ್ವ ಇಲ್ಲ ಎಂದರೆ ಸಾಕ್ಷಿ ಈ ವಿಷಯ ಇಲಾಖೆಯವರಿಗೆ ಸಂಬಂಧಪಟ್ಟಿದ್ದು ಎಂದು ನುಡಿದಿರುತ್ತಾರೆ . ಎನ್ ವಿ ನಾಯ್ಕರವರು ನೀಡಿದ ಲೆಕ್ಕ ಪರಿಶೋಧನಾ ವರದಿಯ ಮಹತ್ವ ಇದೆಯೋ ಇಲ್ಲವೋ ಎಂದು ಹೇಳಲು ನಮ್ಮ ಬ್ಯಾಂಕಿನಲ್ಲಿ ಯಾರು ಸಕ್ಷಮ ವ್ಯಕ್ತಿಗಳು ನನಗೆ ಗೊತ್ತಿಲ್ಲ . ನಾನು ಹಾಜರು ಪಡಿಸಿದ ಎನ್ ವಿ ನಾಯ್ಕ ನಿವೃತ್ತ ಲೆಕ್ಕ ಪರಿಶೋಧನಾ ವರದಿ ದೃಢೀಕೃತ ನಕಲು ಹಾಗೂ 2018-2019 ನೇ ಸಾಲಿನ ಕೆಡಿಸಿಸಿ ಬ್ಯಾಂಕಿನ ತಪಾಸಣಾ ವರದಿಯ ದೃಢೀಕೃತ ನಕಲುಗಳಲ್ಲಿರುವ ವರದಿಗಳನ್ನು ನೋಡಿದಾಗ ಆರೋಪಿ ಎಷ್ಟು ಹಣಕ್ಕೆ ಮೋಸ ಮಾಡಿದ್ದಾರೆ ಎಂದು ಕಂಡು ಬರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿ ಈ ದಾಖಲಾತಿಗಳು ಈ ಕೇಸಿಗೆ ಸಂಬಂಧಪಟ್ಟಿಲ್ಲ ಎಂದು ನುಡಿದಿರುತ್ತಾರೆ . ನಾನು ನನ್ನ ಕಳೆದ ಬಾರಿಯ ಪಾಟೀ ಸವಾಲಿನಲ್ಲಿ ಆರೋಪಿ ಬ್ಯಾಂಕಿಗೆ ಮಾಡಿದ ಮೋಸಕ್ಕೆ ಸಂಬಂಧಪಟ್ಟಂತೆ ಹಣವನ್ನು ಮರು ಪಾವತಿ ಮಾಡಿದ್ದಾರೆ ಎಂದು ಹೇಳಿದ್ದೇನೆ ಎಂದರೆ ಸಾಕ್ಷಿ ಅವರು ಕೆಲವೊಂದು ಹಣವನ್ನು ಮರು ಪಾವತಿ ಮಾಡಿದ್ದಾರೆ ಹಾಗೂ ಕೆಲವೊಂದು ಹಣದ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ನುಡಿದಿರುತ್ತಾರೆ . ದಿಃ 05-07-2024 ರಂದು ಹಾಜರು ಪಡಿಸಿದ ದಾಖಲಾತಿಗಳ ಪ್ರಕಾರ ಆರೋಪಿ ಎಷ್ಟು ಹಣವನ್ನು ಮರು ಪಾವತಿ ಮಾಡಿದ್ದಾರೆ ಎಂದರೆ ಸಾಕ್ಷಿ ಆ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ನುಡಿದಿರುತ್ತಾರೆ . ಆರೋಪಿ ಹಣ ಮರು ಪಾವತಿ ಮಾಡಿದ ಬಗ್ಗೆ ತನಿಖಾಧಿಕಾರಿಗೆ ತಿಳಿಸಿರುತ್ತೇವೆ. ತನಿಖಾಧಿಕಾರಿಗೆ ಲಿಖಿತವಾಗಿ ತಿಳಿಸಿಲ್ಲ, ತನಿಖೆ ಮಾಡಬೇಕಾದರೆ ಅವರಿಗೆ

ತಿಳಿಯುತ್ತದೆ . ಆರೋಪಿ ಅಪರಾತಪರಾ ಮಾಡಿರುವ ಬಗ್ಗೆ ಎಷ್ಟು ಹಣ ಮರು ಪಾವತಿ ಮಾಡಿದ್ದಾರೆ ನಾನು ತಿಳಿದುಕೊಂಡಿಲ್ಲ . ಕೆಡಿಸಿಸಿ ಬ್ಯಾಂಕಿನವರು ನೀಡಿದ ವರದಿಯಲ್ಲಿ ಸಂಘದಲ್ಲಿ ಉಂಟಾದ ಲೆಕ್ಕಪತ್ರ ವ್ಯತ್ಯಾಸ ಹಾಗೂ ಆರ್ಥಿಕ ನಷ್ಟಕ್ಕೆ ಸಂಘದ ಮುಖ್ಯ ಕಾರ್ಯನಿರ್ವಾಹಕರು ಹಾಗೂ ಆಡಳಿತ ಮಂಡಳಿಯವರೇ ಜವಾಬ್ದಾರರಾಗಿರುತ್ತಾರೆ ಎಂದು ಬರೆಯಲಾಗಿದೆ ಎಂದರೆ ಸರಿ . ಇದಕ್ಕೆ ಸಂಬಂಧಪಟ್ಟಂತೆ ನಮ್ಮ ಸಂಸ್ಥೆಯಿಂದ ಆಡಳಿತ ಮಂಡಳಿಯ ವಿರುದ್ಧ ಈವರೆಗೆ ಏನು ಕ್ರಮ ಕೈಗೊಂಡಿದ್ದೀರಿ ಎಂದರೆ ಸಾಕ್ಷಿ ಆಡಳಿತ ಮಂಡಳಿಯವರು ವ್ಯವಸ್ಥಾಪಕರ ವಿರುದ್ಧ ಕ್ರಮ ಕೈಗೊಂಡಿದ್ದಾರೆ ಎಂದು ನುಡಿದಿರುತ್ತಾರೆ . ಇದರ ಪ್ರಕಾರ ಜಂಟಿಯಾಗಿ ಹೊಣೆಗಾರಿಕೆ ಕೆಡಿಸಿಸಿ ಬ್ಯಾಂಕಿನ ವರದಿಯಿಂದ ಕಂಡು ಬರುತ್ತದೆ ಎಂದರೆ ಸಾಕ್ಷಿ ಮುಖ್ಯ ಕಾರ್ಯನಿರ್ವಾಹಕರಿಗೆ ಎಲ್ಲಾ ಹೊಣೆ ಇರುತ್ತದೆ ಎಂದು ನುಡಿದಿರುತ್ತಾರೆ . ನಾನು ಸಘದ ಬಗ್ಗೆ ತಕ್ಕಂತೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ . ನ್ಯಾಯಾಲಯದ ಮುಂದೆ ಸತ್ಯವನ್ನು ಹೇಳುತ್ತಿಲ್ಲ ಎಂದರೆ ಸರಿಯಲ್ಲ. ನನಗೆ ಎಲ್ಲಾ ಸಂಗತಿ ತಿಳಿದಿದ್ದರೂ ಕೂಡ ಯಾವುದೇ ಸಂಗತಿ ತಿಳಿದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸುಳ್ಳು .

16. ನಾವು ಹಾಜರು ಪಡಿಸಿದ ಅಕೌಂಟ್ ಸ್ಟೇಟ್ ಮೆಂಟ್ ಕೆಡಿಸಿಸಿ ಬ್ಯಾಂಕಿನಲ್ಲಿ ನಾವು ಹೊಂದಿರುವ ಖಾತೆಗೆ ಸಂಬಂಧಪಟ್ಟದ್ದು ಎಂದರೆ ಸರಿ . ನನಗೆ ಅಕೌಂಟ್ ಸ್ಟೇಟ್ ಮೆಂಟ್ ನೋಡಿದರೆ ಗೊತ್ತಾಗುತ್ತದೆ . ನಾವು ಯಾವ ಸಾಲಗಾರರಿಗೆ ಚೆಕ್ ನ್ನು ಕೊಟ್ಟಿರುತ್ತೇವೋ ಆ ಚೆಕ್ ಪಾಸಾದ ಬಗ್ಗೆ ಅವರ ಹೆಸರು ಹಾಗೂ ಚೆಕ್ ನಂಬರ ಇರುತ್ತದೆ . ಈ ಪ್ರಕರಣದ ಎಮ್ ಎಚ್ ನಾಯ್ಕರವರಿಗೆ ದಿಃ 28-05-2020 ರಂದು ಸಾಲವನ್ನು ನೀಡಿದ್ದೆವು . ನಮ್ಮ ಅಕೌಂಟ್ ನಲ್ಲಿ ಅವರ ಹೆಸರು ಹಾಗೂ ಚೆಕ್ ನಂಬರ ಇರುತ್ತದೆ . ಆ ಒಂದು ಸ್ಟೇಟ್ ಮೆಂಟ್ ನ್ನು ಒಂದೊಮ್ಮೆ ಆರೋಪಿ ಅರ್ಜಿಯಲ್ಲಿ ಸಲ್ಲಿಸಿ ದಾಖಲಾತಿಯನ್ನು ಕೋರಿದರೆ ಹಾಜರು ಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಈ ಮೊದಲೇ ಹಾಜರು ಮಾಡಿದ್ದೇವೆ ಎಂದು ನುಡಿದಿರುತ್ತಾರೆ . ಬ್ಯಾಂಕ್ ಸ್ಟೇಟ್ ಮೆಂಟ್ ಹಾಜರು ಪಡಿಸಲು ತೊಂದರೆ ಇಲ್ಲ . ಕೇಸನ್ನು ದಾಖಲು ಮಾಡುವಾಗ ನಾನು ಅಕೌಂಟ್ ಸ್ಟೇಟ್ ಮೆಂಟ್ ನ್ನು ನೋಡಿದ್ದೇನೆ . ಅಕೌಂಟ್ ಸ್ಟೇಟ್ ಮೆಂಟ್ ನಲ್ಲಿ

ಪಿಡಬ್ಲೂಃ 1

ಇರುವ ವಿಚಾರ ನೋಡಿರುವ ಬಗ್ಗೆ ನೆನಪಿದೆ . ಆರೋಪಿಗೆ ಸಂಬಂಧಪಟ್ಟ ಖಾತೆಯಲ್ಲಿ ಕೆಡಿಸಿಸಿ ಬ್ಯಾಂಕ್ ಗೆ ಹೊಂದಿರುವಂತಹ ಖಾತೆಯನ್ನು ದಿಃ 28-5-2020 ರಂದು ಎಮ್ ಹೆಚ್ ನಾಯ್ಕರವರ ಖಾತೆಯಿಂದ 19,50,000/- ರೂ. ಆರೋಪಿಯ ಖಾತೆಗೆ ವರ್ಗಾವಣೆ ಆಗಿರುವುದು ಕಂಡು ಬರುತ್ತದೆ ಎಂದರೆ ಸರಿ , ಆದರೆ ಅದು ನಮ್ಮ ಬ್ಯಾಂಕಿನದ್ದು ಅಲ್ಲ . ಸಾಕ್ಷಿ ಸದರಿ ದಾಖಲಾತಿಯಲ್ಲಿ 19,50,000/- ಇರುವುದು ಕಂಡು ಬರುತ್ತದೆ, ಆದರೆ ಅದು ನಮ್ಮ ಬ್ಯಾಂಕಿನದ್ದು ಅಲ್ಲ ಎಂದು ಹೇಳಿದ್ದರಿಂದ ಆರೋಪಿತರ ವಕೀಲರು ಸದರಿ ಭಾಗವನ್ನು ನಿಶಾನೆಯಾಗಿ ಗುರುತಿಸಲು ಮಾಡಿದ ಮನವಿಯನ್ನು ತಿರಸ್ಕರಿಸಲಾಯಿತು . ಸದರಿ ದಾಖಲಾತಿಯನ್ನು ಕಡತದಲ್ಲಿ ಅಳವಡಿಸಲಾಗಿದೆ . ಆ ಹಣವನ್ನು ದಿಃ 28-05-2020 ಕ್ಕೆ ಕುಮಟಾ ವಿಎಸ್ ಎಸ್ ಗೆ ಚೆಕ್ ನಂ. 729874 ರ ಮುಖಾಂತರ ಪುನಃ ಸಂದಾಯವಾಗುವುದು ಕಂಡು ಬರುತ್ತದೆ ಎಂದರೆ ಸಾಕ್ಷಿ ಅದು ನಮ್ಮ ಬ್ಯಾಂಕಿನದ್ದು ಅಲ್ಲ ಎಂದು ನುಡಿದಿರುತ್ತಾರೆ . ಕುಮಟಾ ವಿಎಸ್ ಎಸ್ ಎಂದರೆ ನಮ್ಮ ಬ್ಯಾಂಕು ಎಂದರೆ ಸರಿ . ಕುಮಟಾ ವಿಎಸ್ ಎಸ್ ಸಂದಾಯವಾಗಿರುವುದು ಕಂಡು ಬರುತ್ತದೆ ಎಂದರೆ ಸರಿ. ಈ ಹಣ ನಮ್ಮ ಖಾತೆಗೆ ಸಂದಾಯವಾಗಿದೆಯೋ ಇಲ್ಲವೋ ನಾನು ನೋಡಿಲ್ಲ . ಹಣ ಸಂದಾಯವಾದ ವಿಚಾರ ಬೇರೆಯವರು ನೋಡಿರುವವರು ನನಗೆ ಹೇಳಿಲ್ಲ . ಆ ದಿನ ಯಾವ ಸಿಬ್ಬಂದಿ ಕೆಲಸ ಮಾಡುತ್ತಿದ್ದರು ಅವರು ನೋಡಿರಬಹುದು . ಈ ಅಕೌಂನಟ್ ಗೆ ಸಂಬಂಧಪಟ್ಟಂತೆ ದಾಖಲಾತಿಯನ್ನು ಪಡೆಯಲು ಆರೋಪಿ ಅರ್ಜಿ ಸಲ್ಲಿಸಿದರೆ ನಮ್ಮ ಯಾವುದೇ ತಕರಾರು ಇಲ್ಲ .

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.